ತ್ತಿದ್ದಾರೆ. ಒಂದು ಲಕ್ಷದ ೨೨ ಸಾವಿರದ ೪೨೦ ರೂಪಾಯಿಗಳನ್ನು ಇದುವರೆಗೆ ವಸೂಲು ಮಾಡಿದ್ದಾರೆ. ಅಗ್ರಿಮೆಂಟ್ ಪ್ರಕಾರವಾಗಿ ೨೨೦-೨೨ಕ್ಕೆ ಅಲ್ಲಿ ಒಂದು ಸ್ಥಳ ಮಾತ್ರವಿದೆ. ಮಂತ್ರೆ ೯ ಎಕರೆ ೮೧ ಸೆಂಟ್ ನಲ್ಲಿ ಸ್ಥಳದಲ್ಲಿ ಮಕ್ಕಳ ಉದ್ಯಾನವನಕೋಸ್ಕರವಾಗಿ ಬಿಟ್ಟಿದ್ದಾರೆ. ಮತ್ತು ೯೯ ವರ್ಷ ಮುಂಗಿಯುವು ದಕ್ಕಿಂತ ಮುಂಚೆ ಅಂದರೆ ೧ ವರ್ಷಕ್ಕಿಂತ ಮೊದಲು ಆದನ್ನು ರಿನ್ಯೂ ಮಾಡಿಕೊಳ್ಳಬೇಕಾದರೆ ಅದಕ್ಕೆ ಕರಾರಿನಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಕಾಲಂ ೫ರ ಪ್ರಕಾರ ಅವರು ಆ ಸ್ಥಳವನ್ನೇನಾದರೂ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಂಡರೆ ಆಗ ಸರ್ಕಾರ ಹಾಗೆ ಅವರು ಉಪಯೋಗಿಸಿಕೊಳ್ಳದೇ ಇರುವಂತೆ ನೋಡಿಕೊಳ್ಳಲು ಅಧಿಕಾರ ಇಟ್ಟುಕೊಂಡಿದ್ದೇವೆ. ಅಗ್ರಿಮೆಂಟ್ ಪ್ರಕಾರ ಲಾವಣಿಯೆಂನ್ನು ಕ್ಯಾನ್ಸಲ್ ಮಾಡುವುದಕ್ಕೂ ಅವಕಾಶವಿದೆ.

ಶ್ರೀ ಕೆ. ಆರ್. ಶ್ರೀನಿವಾಸಾಲು ನಾಯ್ಡು.—ಸ್ವಾಮಿ, ಅಲ್ಲಿ ಪಂಜೆಯನ್ನು ಉಟ್ಟುಕೊಂಡು ಒಳಗೆ ಹೋದರೆ ಒಳಕ್ಕೆ ಬಿಡುವುದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಜೊತೆಗೆ ಇನ್ನೊಂದು ವಿಶಾದಕರ ವಿಷಯವೇನೆಂದರೆ ಕೇವಲ ೩೦ ರೂಪಾಯಿಗಳ ಬಾಡಿಗೆಗೆ ಕೊಟ್ಟಿದ್ದೇವೆಂದು ತಾವೇ ಉತ್ತರದಲ್ಲಿ ಹೇಳಿದಿರಿ. ಆದುದರಿಂದ ಈಗಾಲಾದರೂ ಸರ್ಕಾರದವರು ಬೌರಿಂಗ್ ಇನ್‌ಸ್ಟ್ಯೂಟನ್ನು ವಹಿಸಿಕೊಳ್ಳುವ ಬಗ್ಗೆ ಯೋಚಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ಕೆ. ಆರ್. ಶ್ರೀನಿವಾಸಾಲು ನಾಯ್ಡುರವರು ಅಲ್ಲಿಂದು ನೀತಿ ನಿಯಮಗಳ ಪ್ರಕಾರ ಸೂಟ್ ಹಾಕಿಕೊಂಡು ಹೋದರೆ ಒಳ್ಳೆಯದು.

ಅಧ್ಯಕ್ಷರು.—ಮುಂದಿನ ೨೭೨, ೨೭೪, ೨೭೬ ಮತ್ತು ೨೭೭ನೇ ಪ್ರಶ್ನೆಗಳಿಗೆ ಮಾನ್ಯ ಸದಸ್ಯರು ಗಳು ಸಭೆಯಲ್ಲಿ ಹಾಜರು ಇಲ್ಲ. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಂಗಿಯಿತು.

QUESTIONS FOR ANSWERS ON THE DAY
(but not taken up)

Collection of revenue from Bowring Institute

218. SRI M. B. RAMASWAMY (Anekal).—Will the Minister for Public Works be pleased to state:—

(*a*) the total extent of Government land given to Bowring Institute;

(*b*) the total revenue collected from this Institute by the Corporation.

(*c*) whether there is any proposal before the Government to take over the Bowring Institute ?

SRI M. MALLIKARJUNA SWAMY (Minister for Public Works).—

(*a*) 9.81 acres.

(*b*) Total revenue collected by the Corporation is Rs. 1,22,420.

(*c*) No.